ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1909**
ಸದಸ್ಯರ ಹೆಸರು	:	ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	26-03-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

ಪ್ರಶ್ನೆ		ಉತ್ತರ
ಅ)	ಸೋಲಾರ್ ಮೇಲ್ಚಾವಣಿ ಘಟಕಗಳನ್ನು ಅಳವಡಿಸಲು ಸರ್ಕಾರ ನೀಡುತ್ತಿರುವ ಪ್ರೋತ್ಸಾಹಗಳೇನು; (ವಿವರ ನೀಡುವುದು)	ರಾಜ್ಯದಲ್ಲಿ ಸೋಲಾರ್ ಮೇಲ್ಚಾವಣಿ ಘಟಕಗಳನ್ನು ಅಳವಡಿಸಲು ಸರ್ಕಾರ ಈ ಕೆಳಕಂಡ ಪ್ರೋತ್ಸಾಹಗಳನ್ನು ಹಮ್ಮಿಕೊಂಡಿದೆ. • ಕರ್ನಾಟಕ ಸರ್ಕಾರವು ದಿನಾಂಕ 22-05-2014 ರಿಂದ ಕರ್ನಾಟಕ ಸರ್ಕಾರದ ಸೌರನೀತಿ 2014-21ನ್ನು ಜಾರಿಗೆ ತಂದಿರುತ್ತದೆ. • ವಿದ್ಯುತ್ ಸರಬರಾಜು ಕಂಪನಿಗಳ ಗ್ರಾಹಕರು ತಮ್ಮ ಸ್ಥಾವರದಲ್ಲಿ ಸೌರ ಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಸದರಿ ಘಟಕಗಳಿಂದ ಗ್ರಾಹಕರು ಉತ್ಪಾದಿಸುವ ಸೌರಶಕ್ತಿ ವಿದ್ಯುತ್ ಉತ್ಪಾದನೆಯು ತಾವು ಗ್ರಿಡ್‌ನಿಂದ ಪಡೆದ ವಿದ್ಯುಚ್ಛಕ್ತಿಗಿಂತ ಹೆಚ್ಚುವರಿಯಾಗಿದ್ದು ಗ್ರಿಡ್‌ಗೆ ಪೂರೈಸಿದ್ದಲ್ಲಿ, ವಿದ್ಯುತ್ ಖರೀದಿ ಒಪ್ಪಂದ ಕೈಗೊಂಡ ಸ್ಥಾವರಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು ಕಾಲಕಾಲಕ್ಕೆ ನಿಗದಿಪಡಿಸುವ ವಿದ್ಯುತ್ ದರದಂತೆ ಗ್ರಾಹಕರಿಗೆ ಹಣ ಪಾವತಿಸಲಾಗುವುದು. • ಸೌರಶಕ್ತಿ ಮೇಲ್ಛಾವಣಿ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ವತಿಯಿಂದ ಸಬ್ಸಿಡಿಯನ್ನು ನೀಡಲಾಗುವುದು. • ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ 13ನೇ ಹಣಕಾಸು ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನದಡಿ ಸರ್ಕಾರಿ ಕಟ್ಟಡಗಳ ಮೇಲೆ ಸೋಲಾರ್ ಪಿ.ವಿ. ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗುತ್ತಿದೆ. • ಕೇಂದ್ರ ಸರಕಾರದ ಐ.ಪಿ.ಡಿ.ಎಸ್ ಯೋಜನೆಯಡಿ ಆಯ್ದ ಸಂಖ್ಯೆಯ ಸರ್ಕಾರಿ ಕಛೇರಿ/ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರಶಕ್ತಿ ಘಟಕಗಳನ್ನು ಅಳವಡಿಸಲಾಗುತ್ತಿದೆ. • ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ.) ವು ಕಟ್ಟಡಗಳ ಛಾವಣಿಯ ಮೇಲೆ ಸೌರ ವಿದ್ಯುತ್ ಉತ್ಪಾದನಾ ಫಲಕಗಳನ್ನು ಸ್ಥಾಪಿಸಿ ಅದರ ಮೂಲಕ ವಿದ್ಯುತ್ ಉತ್ಪಾದಿಸುವ ಗೃಹಬಳಕೆ, ಆಸ್ಪತ್ರೆ ಹಾಗೂ ಶೈಕ್ಷಣಿಕ ಪ್ರವರ್ಗಗಳಿಗೆ ಅವರ ಒಂದು ಸಾರಿ ಆಯ್ಕೆಯ ಒಟ್ಟು ಮಾಪಕ(Gross metering) ಅಥವಾ ನಿವ್ವಳ ಮಾಪಕ(Net metering) ಯಾವುದನ್ನು ಆಯ್ಕೆ ಮಾಡುತ್ತಾರೋ ಅದನ್ನು ಹಾಗೂ ಕೈಗಾರಿಕಾ, ವಾಣಿಜ್ಯ ಮತ್ತು ಇತರೆ ಎಲ್ಲಾ ವರ್ಗದ ಗ್ರಾಹಕರಿಗೆ ಸ್ವಬಳಕೆಗೆ ನಿವ್ವಳ ಮಾಪಕದಡಿ ಗ್ರಿಡ್‌ಗೆ ಸರಬರಾಜಾಗುವ ಪ್ರತಿ ಯೂನಿಟ್‌ಗೆ ದರ ನಿಗದಿ ಪಡಿಸಲಾಗಿದೆ. • ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಪ್ರೋತ್ಸಾಹಿಸಲು ಮತ್ತು ಸೌರ ಶಕ್ತಿ ಮೇಲ್ಛಾವಣಿ ಯೋಜನೆಗಳಲ್ಲಿ ಮೂರನೇ ವ್ಯಕ್ತಿಯಿಂದ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಲು ಕೆ.ಇ.ಆರ್.ಸಿ. ಯು ವಿವಿಧ ಮಾಡೆಲ್‌ಗಳಿಗೆ ಅನುಮೋದನೆ ನೀಡಿ ದಿನಾಂಕ:09.12.2019ರಂದು ಆದೇಶ ಹೊರಡಿಸಿದೆ.

- ಸೌರ ಮೇಲ್ಛಾವಣಿಯ ಘಟಕದ ಸಾಮರ್ಥ್ಯವನ್ನು ಹಾಲಿ ಸ್ಥಾವರದ ಮಂಜೂರಾದ ಸಾಮರ್ಥ್ಯಕ್ಕೆ (sanctioned load) ಶೇ.100 ಗೆ ಮಿತಿಗೊಳಿಸಲಾಗಿದೆ.
- ಸೌರ ಮೇಲ್ಛಾವಣಿ ಘಟಕದ ಗರಿಷ್ಠ ಸಾಮರ್ಥ್ಯವನ್ನು 1 ಮೆ.ವ್ಯಾ. ನಿಂದ 2 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಲಾಗಿದೆ.
- ಪ್ರಸ್ತುತ ದಿನಾಂಕ:01.08.2019ರ ಕೆ.ಇ.ಆರ್.ಸಿ. ಆದೇಶದಂತೆ ಸದರಿ ಸ್ಥಾವರಗಳಿಂದ ಸರಬರಾಜಾಗುವ ಪ್ರತಿ ಯೂನಿಟ್ ಪಿಪಿಎ ದರ ಈ ಕೆಳಗಿನಂತಿದೆ:

ಸಾಮರ್ಥ್ಯ	ಸಬ್ಸಿಡಿ ರಹಿತ ದರ ರೂ. ಗಳಲ್ಲಿ	ಸಬ್ಸಿಡಿ ಸಹಿತ ದರ ರೂ. ಗಳಲ್ಲಿ
1 ಕಿ.ವ್ಯಾ. –10 ಕಿ.ವ್ಯಾ (ಗೃಹಬಳಕೆ ಮಾತ್ರ)	3.99	2.97
1 ಕಿ.ವ್ಯಾ. –2 ಮೆ.ವ್ಯಾ	3.07	2.32

ಮುಂದುವರೆದು, ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (ಎಮ್.ಎನ್.ಆರ್.ಇ) ರವರಿಂದ ವರ್ಷ 2022 ರ ಅಂತ್ಯಕ್ಕೆ ದೇಶಾದ್ಯಂತ ಸುಮಾರು 40000 ಮೆ.ವ್ಯಾ ನಷ್ಟು ಗ್ರಿಡ್ ಸಂಪರ್ಕಿತ ಸೌರ ಮೇಲ್ಛಾವಣಿಯನ್ನು ಅಳವಡಿಸುವ ಗುರಿ ಹೊಂದಿದ್ದು, Rooftop Phase–II ಗೆ ಸಂಬಂಧಿಸಿದಂತೆ ದಿನಾಂಕ:20.08.2019ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸದರಿ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ಸಹಾಯಧನವನ್ನು ನಿಗಧಿಪಡಿಸಲಾಗಿದೆ.

Type of residential sector	CFA (as percentage of benchmark cost or cost discovered through competitive process whichever is lower)
Residential sector (maximum up to 3 kW capacity)	40 % of benchmark cost
Residential sector (above 3 kW capacity and up to 10 kW capacity)*	40 % up to 3 KW Plus 20% for RTS system above 3 kW and up to 10 kW
Group Housing Societies/Residential Welfare Associations (GHS/RWA) etc. for common facilities up to 500 kWp (@ 10 kWp per house), with the upper limit being inclusive of individual rooftop plants already installed by individual residents in that GHS/RWA at the time of installation of RTS for common activity	20 %

		*The residential sector users may install RTS plant of even higher capacity as provisioned by respective State electricity regulations; however, the CFA will be limited up to 10 kWp capacity of RTS plant.
ಆ)	ಯಾವ ದರದಲ್ಲಿ ಸೋಲಾರ್ ವಿದ್ಯುತ್ ನ್ನು ವಿದ್ಯುತ್ ನಿಗಮಗಳು ಖರೀದಿಸುತ್ತಿವೆ; (ವಿವರ ನೀಡುವುದು)	ಪ್ರಸ್ತುತ, ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ಗೃಹಬಳಕೆ, ಕೈಗಾರಿಕಾ, ವಾಣಿಜ್ಯ ಮತ್ತು ಇತರೆ ಗ್ರಾಹಕರು ತಮ್ಮ ಮನೆಯ ಮೇಲೆ ಸೋಲಾರ್ ಮೇಲ್ಚಾವಣಿ ಘಟಕಗಳನ್ನು ಅಳವಡಿಸಿಕೊಂಡು ನೆಟ್ ಅಥವಾ ಗ್ರಾಸ್ ಮೀಟರಿಂಗ್ ವ್ಯವಸ್ಥೆಯಡಿಯಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ನೆಟ್ ಮೀಟರಿಂಗ್ ವ್ಯವಸ್ಥೆಯಲ್ಲಿ ಗ್ರಾಹಕರು ಸೋಲಾರ್‌ನಿಂದ ಉತ್ಪಾದಿಸಿರುವ ವಿದ್ಯುತ್ತನ್ನು ಸ್ವಂತ ಬಳಕೆಯ ನಂತರ, ಉಳಿದ ವಿದ್ಯುತ್ ಅನ್ನು ಹಾಗೂ ಗ್ರಾಸ್ ಮೀಟರಿಂಗ್ ವ್ಯವಸ್ಥೆಯಲ್ಲಿ ಉತ್ಪಾದಿಸಿರುವ ಸಂಪೂರ್ಣ ವಿದ್ಯುತ್ತನ್ನು, ವಿದ್ಯುತ್ ವಿತರಣಾ ಕಂಪನಿಗಳಿಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿದ ದರದಲ್ಲಿ ಮಾರಾಟ ಮಾಡಬಹುದಾಗಿದೆ. ಕಾಲಕಾಲಕ್ಕೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿದ ದರಗಳು ಈ ಕೆಳಕಂಡಂತಿರುತ್ತವೆ:

1 ಕಿ.ವ್ಯಾ.ಪಿ ಸೋಲಾರ್ ಪ್ಯಾನಲ್ ಅಳವಡಿಸಲು ತಗಲುವ ಬಂಡವಾಳ ವೆಚ್ಚ ರೂ	ಸೋಲಾರ್ ಘಟಕದ ಸಾಮರ್ಥ್ಯ (ಕೆ.ಡಬ್ಲ್ಯು.ಪಿ)	ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿದ ಪ್ರತಿ ಯೂನಿಟ್ ನ ವಿದ್ಯುತ್ ಖರೀದಿ ದರ (ರೂ. ಗಳಲ್ಲಿ)		ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶ ದಿನಾಂಕ
		MNRE ಸಹಾಯ ಧನ ಪಡೆಯದವರಿಗೆ	MNRE ಸಹಾಯ ಧನ ಪಡೆದವರಿಗೆ)	
90,000	1–1000	9.56	7.20	10.10.2013
75,000 70,000 65,000 60,000 55,000	1–10, >10–50, >50–100, >100–500, >500–1000	7.08 6.61 6.19 5.67 5.20	6.03 5.63 5.23 4.83 4.43	02.05.2016
40,000	1–1000	3.56	2.67	18.05.2018
45,000 32,500	1–10, 1–1000,	3.99 3.07	2.97 2.32	01.08.2019

ಇ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು). ಉತ್ಪಾದಿಸುತ್ತಿರುವ ವಿದ್ಯುತ್ ಎಷ್ಟು; ಇದಕ್ಕಾಗಿ ಸರ್ಕಾರ ನೀಡುವ ಸಹಕಾರವೇನು? (ವಿವರ ನೀಡುವುದು)

ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜನವರಿ – 2020 ರ ಅಂತ್ಯದವರೆಗೆ ಒಟ್ಟು 4027 ಸಂಖ್ಯೆಯ ಗ್ರಾಹಕರುಗಳು ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಂಡಿದ್ದು, ಅವುಗಳಿಂದ 2019–20 ನೇ ಸಾಲಿನ ಜನವರಿ – 2020 ರ ಅಂತ್ಯದವರೆಗೆ 191.427 ದಶಲಕ್ಷ ಯೂನಿಟ್ ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸೌರಶಕ್ತಿ ಮೇಲ್ಛಾವಣಿ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರದಿಂದ ಯಾವುದೇ ಸಹಾಯಧನ ಇರುವುದಿಲ್ಲ, ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ವತಿಯಿಂದ ಯೋಜನಾ ವೆಚ್ಚದ ಶೇ 15 ರಷ್ಟು ಸಬ್ಸಿಡಿಯನ್ನು ನೀಡಲಾಗುತ್ತಿತ್ತು.

ದಿನಾಂಕ:20.08.2019ರಂದು ಎಮ್.ಎನ್.ಆರ್.ಇ ರವರಿಂದ Rooftop Phase-II ಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಪ್ರಸ್ತುತ ಎಂ.ಎನ್.ಆರ್.ಇ. ರವರಿಂದ ಈ ಕೆಳಗಿನಂತೆ ಸಬ್ಸಿಡಿ ದೊರೆಯುತ್ತದೆ:

Type of residential sector	CFA (as percentage of benchmark cost or cost discovered through competitive process whichever is lower)
Residential sector (maximum up to 3 kW capacity)	40 % of benchmark cost
Residential sector (above 3 kW capacity and up to 10 kW capacity)*	40 % up to 3 KW Plus 20% for RTS system above 3 kW and up to 10 kW
Group Housing Societies/Residential Welfare Associations (GHS/RWA) etc. for common facilities up to 500 kWp (@ 10 kWp per house), with the upper limit being inclusive of individual rooftop plants already installed by individual residents in that GHS/RWA at the time of installation of RTS for common activity	20 %

		*The residential sector users may install RTS plant of even higher capacity as provisioned by respective State electricity regulations; however, the CFA will be limited up to 10 kWp capacity of RTS plant.

ಸಂಖ್ಯೆ: ಎನರ್ಜಿ 88 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1909 ಕ್ಕೆ ಅನುಬಂಧ

ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು 4027 ಸಂಖ್ಯೆಯ ಗ್ರಾಹಕರುಗಳು ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಂಡಿರುತ್ತಾರೆ. 2019-20 ನೇ ಸಾಲಿನ ಜನವರಿ-2020 ರ ಅಂತ್ಯದಲ್ಲಿರುವಂತೆ ರಾಜ್ಯದಲ್ಲಿರುವ ಸೋಲಾರ್ ಮೇಲ್ಛಾವಣಿ ಘಟಕಗಳ ಸಂಖ್ಯೆ ಹಾಗೂ ಅವುಗಳಿಂದ ಖರೀದಿಸಲಾದ ವಿದ್ಯುತ್ ಪ್ರಮಾಣದ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ.

ಕಂಪನಿ	ಕ್ರ.ಸಂ	ಜಿಲ್ಲೆ	ಗ್ರಾಹಕರು ಅಳವಡಿಸಿಕೊಂಡಿರುವ ಸೋಲಾರ್ ಮೇಲ್ಛಾವಣಿ ಘಟಕಗಳ ಸಂಖ್ಯೆ	ಸೋಲಾರ್ ಮೇಲ್ಛಾವಣಿ ಘಟಕಗಳಿಂದ ಖರೀದಿಸಲಾದ ವಿದ್ಯುತ್ ಪ್ರಮಾಣ (ದಶಲಕ್ಷ ಯೂನಿಟ್ ಗಳಲ್ಲಿ)
ಬೆ.ವಿ.ಕಂ	1	ಬೆಂಗಳೂರು ನಗರ	1464	34.71
	2	ಬೆಂ.ಗ್ರಾಮಾಂತರ	120	12.24
	3	ದಾವಣಗೆರೆ	125	1.13
	4	ಚಿಕ್ಕಬಳ್ಳಾಪುರ	25	9.72
	5	ತುಮಕೂರು	23	3.48
	6	ಕೋಲಾರ	57	19.09
	7	ರಾಮನಗರ	23	1.46
	8	ಚಿತ್ರದುರ್ಗ	27	6.40
ಮ.ವಿ.ಕಂ	9	ದಕ್ಷಿಣ ಕನ್ನಡ	482	1.857
	10	ಉಡುಪಿ	287	1.121
	11	ಶಿವಮೊಗ್ಗ	143	0.397
	12	ಚಿಕ್ಕಮಗಳೂರು	17	0.456
ಚಾವಿಸನಿನಿ	13	ಮೈಸೂರು	324	66.74
	14	ಮಂಡ್ಯ	33	0.15
	15	ಹಾಸನ	17	0.05
	16	ಕೊಡಗು	5	7.82
	17	ಚಾಮರಾಜ ನಗರ	4	1.00
ಹು.ವಿ.ಕಂ	18	ಧಾರವಾಡ	144	2.06
	19	ಗದಗ	79	3.32
	20	ಹಾವೇರಿ	54	0.75
	21	ಉತ್ತರ ಕನ್ನಡ	118	1.68
	22	ಬೆಳಗಾವಿ	211	4.80
	23	ವಿಜಯಪುರ	20	1.23
	24	ಬಾಗಲಕೋಟೆ	78	2.99
ಗು.ವಿ.ಕಂ	25	ಬೀದರ್	6	0.696
	26	ಕಲಬುರ್ಗಿ	35	0.345
	27	ಯಾದಗಿರಿ	2	0.996
	28	ಬಳ್ಳಾರಿ	61	0.796
	29	ರಾಯಚೂರು	17	1.383
	30	ಕೊಪ್ಪಳ	26	2.56
		ಒಟ್ಟು	**4027**	**191.427**